**ಸಾಕ್ಷಿಗೆ ದಿನಾಂಕ:15-10-2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. V R N ವಕೀಲರಿಂದ ::**

ವಾದಿಯು ಈ ದಾವೆಯನ್ನು ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೋರಿ ಸಲ್ಲಿಸಿರುತ್ತಾರೆ. ವಾದಿಯು ನನ್ನ ಗಂಡ ಅಂದರೆ ಶ್ರೀ ವೆಂಕಟೇಶ್ ಭಟ್‌ರವರ ತಂಗಿಯಾಗಿರುತ್ತಾರೆ ಎಂದರೆ ಸರಿ. ನನ್ನ ಗಂಡ 2021 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನನ್ನ ಗಂಡ ತೀರಿಕೊಳ್ಳುವ ಸಮಯದಲ್ಲಿ ಈ ದಾವೆಯು ಚಾಲ್ತಿಯಲ್ಲಿತ್ತು ಎಂದರೆ ಸರಿ. ನನ್ನ ಗಂಡನವರು ಈ ದಾವೆಯಲ್ಲಿ ಯಾವ ಅಂಶಗಳನ್ನು ಹೇಳಿ ತಕರಾರು ಸಲ್ಲಿಸಿರುತ್ತಾರೆ ಎನ್ನುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಪ್ರಮಾಣ ಪತ್ರದಲ್ಲಿ ನನ್ನ ಗಂಡ ಯಾವಾಗ ತೀರಿಕೊಂಡಿರುತ್ತಾರೆ ಎಂದು ನಾನು ತಿಳಿಸಿರುತ್ತೇನೋ ಅಥವಾ ಇಲ್ಲವೋ ಈಗ ನನಗೆ ನೆನಪಿಲ್ಲ. ನನ್ನ ಮಕ್ಕಳು ಪ್ರಸ್ತುತದಲ್ಲಿ ಶೃಂಗೇರಿಯಲ್ಲಿ ವಾಸವಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಸಣ್ಣ ಮಗಳು ಶೃಂಗೇರಿಯಲ್ಲಿ ವಾಸವಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಈಗ ಹೇಳುತ್ತಿರುವ ನನ್ನ ಸಣ್ಣ ಮಗಳು ಶೃಂಗೇರಿ ಪಟ್ಟಣದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

ನನ್ನ ಮದುವೆ 1970 ರಲ್ಲಿ ಆಗಿರುತ್ತದೆ. ನನ್ನ ಮದುವೆ ಸಮಯದಲ್ಲಿ ವಾದಿ, ನನ್ನ ಗಂಡ ಹಾಗೂ ಅವರ ಸಹೋದರ-ಸಹೋದರಿಯರು ಒಟ್ಟಿಗೆ ಜಂಟೀ ಕುಟುಂಬದಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನನ್ನ ಮದುವೆ ಕಾಲದಲ್ಲಿ, ವಾದಿ, 7 ನೇ ಪ್ರತಿವಾದಿ ಮತ್ತು 8 ನೇ ಪ್ರತಿವಾದಿಗಳಿಗೆ ಇನ್ನೂ ಸಹ ಮದುವೆ ಅಗಿರಲಿಲ್ಲ ಎಂದರೆ ಸರಿ. ಈ ಮೂರು ವ್ಯಕ್ತಿಗಳು ಯಾವ ಸಾಲಿನಲ್ಲಿ ಮದುವೆಯಾಗಿರುತ್ತಾರೆ ಎಂದು ನಿಖರವಾಗಿ ಹೇಳಲು ಈಗ ನನಗೆ ನೆನಪಿಲ್ಲ. ಸಾಕ್ಷಿ ಮುದುವರೆದು ಅವರೆಲ್ಲರ ಮದುವೆಗಳನ್ನು ನನ್ನ ಗಂಡನೇ ಮುಂದೆ ನಿಂತು ಮಾಡಿಕೊಟ್ಟಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ಅ ಮೂರು ವ್ಯಕ್ತಿಗಳ ಮದುವೆಗಳನ್ನು ನಮ್ಮ ಅತ್ತೆ ಅಂದರೆ ಶಾಂತಲಕ್ಷ್ಮಮ್ಮ ಅವರು ಮಾಡಿಕೊಟ್ಟಿರುತ್ತಾರೆ ಹೊರತು ನಾನು ಹೇಳುವಂತೆ ನನ್ನ ಗಂಡ ಮಾಡಿಕೊಟ್ಟಿರುವುದಿಲ್ಲ

ಎಂದರೆ ಸರಿಯಲ್ಲ. ವಾದಿಗೆ 1983ನೇ ಇಸವಿಯಲ್ಲಿ ಮದುವೆಯಾಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ.

ನನ್ನ ಮದುವೆ ಕಾಲದಲ್ಲಿ 6ನೇ ಪ್ರತಿವಾದಿ ಅಂದರೆ ನಾಗರಾಜ ಎನ್ನುವವರಿಗೂ ಸಹ ಮದುವೆ ಆಗಿರಲ್ಲಿಲ್ಲ ಎಂದರೆ ಸರಿ. ಅದೇ ರೀತಿ 9ನೇ ಪ್ರತಿವಾದಿಯವರ ಗಂಡ ಮತ್ತು 10 ಮತ್ತು 11ನೇ ಪ್ರತಿವಾದಿಗಳ ತಂದಯಾದ ಕುಮಾರಸ್ವಾಮಿ ಎನ್ನುವವರಿಗೂ ಸಹ ಸದರಿ ಸಮಯದಲ್ಲಿ ಇನ್ನೂ ಸಹ ಮದುವೆ ಆಗಿರಲಿಲ್ಲ ಎಂದರೆ ಸರಿ. ಸದರಿ ಕುಮಾರಸ್ವಾಮಿಯವರಿಗೆ 1987 ರಲ್ಲಿ ಮದುವೆಯಾಗಿರುತ್ತದೆ ಎಂದರೆ ಸರಿ. ಸದರಿ ಕುಮಾರಸ್ವಾಮಿಯವರಿಗೆ ಮದುವೆಯಾಗುವ ಸಮಯದವರೆಗೂ ನಾವೆಲ್ಲರೂ ಸಹ ಒಂದೇ ಮನೆಯಲ್ಲಿ ಒಟ್ಟಿಗೆ ಜಂಟೆಯಗಿ ವಾಸ ಮಾಡುತ್ತಿದ್ದೆವು ಎಂದರೆ ಸರಿ. ನನ್ನ ಮಾವನವರು 1974 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ಕುಟುಂಬದಲ್ಲಿ 21.04.1980 ರಲ್ಲಿ ಒಂದು ವಿಭಾಗ ಪತ್ರ ಆಗಿರುವ ಬಗ್ಗೆ ನನಗೆ ತಿಳಿದಿರುತ್ತದೆ. ಆ ವಿಭಾಗ ಪತ್ರಕ್ಕೆ ನಾನಾಗಲಿ ಅಥವಾ ನನ್ನ ಮಕ್ಕಳಾಗಲೀ ಯಾವುದೇ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಆ ವಿಭಾಗ ಪತ್ರಕ್ಕೆ ಯಾರ್ಯಾರು ಸಹಿ ಮಾಡಿರುತ್ತಾರೆ ಎನ್ನುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಸದರಿ ವಿಭಾಗ ಪತ್ರಕ್ಕೆ ವಾದಿ ಸಹಿ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

ನನ್ನ ಮದುವೆ ಸಮಯದಲ್ಲಿ ನನ್ನ ಮಾವನವರೇ ನಮ್ಮ ಕುಟುಂಬದ ಆಸ್ತಿಗಳ ನಿರ್ವಹಣೆ ಮಾಡುತ್ತಿದರು ಎಂದರೆ ಸರಿ . ನನ್ನ ಮಾವನವರು ತೀರಿಕೊಂಡ ನಂತರದಲ್ಲಿ ಸದರಿ ಆಸ್ತಿಗಳ ನಿರ್ವಹಣೆಯನ್ನು ನನ್ನ ಅತ್ತೆಯವರು ಮಾಡುತ್ತಿದ್ದರು ಎಂದರೆ ಸಾಕ್ಷಿಯು ನನ್ನ ಗಂಡ ಸಹ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ನನ್ನ ಮಾವನವರು ತೀರಿಕೊಂಡ ನಂತರದಲ್ಲಿ ಅವರ ಮಕ್ಕಳ ಸಮ್ಮತಿ ಮೇರೆಗೆ ಒಟ್ಟು ಕುಟುಂಬ ಆಸ್ತಿ ತಗಳ ಖಾತೆಯು ನನ್ನ ಅತ್ತೆಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ನನ್ನ ಮಾವ ತೀರಿಕೊಂಡ ನಂತರದಲ್ಲಿಯೂ ಸಹ ನಮ್ಮ ಒಟ್ಟು ಕುಟುಂಬದ ಸದಸ್ಯರೆಲ್ಲರೂ ಸಹ ಒಟ್ಟಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಅತ್ತೆ 1988ರಲ್ಲಿ ಮನೆಯ ಅಟ್ಟದಿಂದ ಕೆಳಗೆ ಬಿದ್ದು ಅವರ ತಲೆಗೆ ಪೆಟ್ಟಾಗಿರುತ್ತದೆ ಎಂದರೆ ಸರಿ. ಆ ನಂತರದಲ್ಲಿ ನನ್ನ ಅತ್ತೆಯವರನ್ನು ತೀರ್ಥಹಳಿಯಲ್ಲಿರುವ ಒಂದು ಮಾನಸಿಕ ಆಸ್ಪತ್ರೆಗೆ

ಚಿಕಿತ್ಸೆಗೆಂದು ನಾವುಗಳು ಸೇರಿಸಿದ್ದೆವು ಎಂದರೆ ಸರಿ. ಸದರಿ ಘಟನೆಯ ನಂತರದಲ್ಲಿ ನನ್ನ ಅತ್ತೆಯವರಿಗೆ ನೆನಪಿನ ಶಕ್ತಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುತ್ತದೆ ಎಂದರೆ ಸಾಕ್ಷಿಯು ಅಷ್ಟಾಗಿ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾವು ನಮ್ಮ ಅತ್ತೆಯನ್ನು ತೀರ್ಥಹಳ್ಳಿಯ ಮಾನಸಿಕ ಆಸ್ಪತ್ರೆಗೆ ಅವರ ತಲೆಗೆ ಪೆಟ್ಟು ಬಿದ್ದಿ ಕಾರಣ ಸೇರಿಸಿದ್ದೆವು ಎಂದರೆ ಸರಿ. ಸದರಿ ಘೆಟನೆಯಿಂದ ನನ್ನ ಅತ್ತೆಯವರಿಗೆ ಆರೋಗ್ಯದ ಸಮಸ್ಯೆ ಬಂದು ನಂತರ 1991 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವೆರೆದು ತೀರಿಕೊಳ್ಳುವ ಸಮಯದವರೆಗೂ ಅವರು ಒಳ್ಳೆಯ ರೀತಿಯಲ್ಲಿ ಓಡಾಡಿಕೊಂಡು ಇದ್ದರು ಎಂದು ನುಡಿದಿರುತ್ತಾರೆ. ಸದರಿ ಸಮಯದಲ್ಲಿ ವಾದಿಯು ನನ್ನ ಅತ್ತೆಯನ್ನು ಆಗಾಗ ನೋಡಿಕೊಳ್ಳಲು ಹಾಗೂ ಮಾತನಾಡಿಸಲು ನಮ್ಮ ಮನೆಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತೆ ತೀರಿಕೊಳ್ಳುವ ವರೆಗೂ ನಮ್ಮ ಕುಟುಂಬದ ಎಲ್ಲರೂ ಒಟ್ಟಿಗೆ ವಾಸವಿದ್ದೆವು ಎಂದರೆ ಸಾಕ್ಷಿಯು 6 ನೇ ಪ್ರತಿವಾದಿ ಅಂದರೆ ನಾಗರಾಜ್ ಮಾತ್ರ ಪ್ರತ್ಯೇಕವಾಗಿ ವಾಸವಿದ್ದರು ಎಂದು ನುಡಿದಿರುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.